**OS No. 72/2023**
**ಪಿ.ಡಬ್ಲ್ಯೂ: 1**

**ದಿನಾಂಕ 12-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

-

**<u>ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ. ಜಿ. ಎಸ್. ಎನ್. ವಕೀಲರಿಂದಃ</u>**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ನಾನು ದಾವೆಯ ಜೊತೆಗೆ ಕೆಲವು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ, ಅವು ಕೆಳಗಿನಂತಿವೆಃ

1. ದಿನಾಂಕಃ 02-08-2022 ರ ದಾನ ಪತ್ರ ಮತ್ತು ಅದರ ಜೊತೆ ಲಗತ್ತಿಸಿದ ಕಂಪೂಟರೈಸ ನಕಲುಗಳನ್ನು ನಿಪಿ-1 ಎಂದು ಗುರುತಿಸಲಾಯಿತು.
2. ಖಾತಾ ಎಕ್ಸಟ್ರ್ಯಾಕ್ಟನ್ನು ನಿಪಿ-2 ಎಂದು ಗುರುತಿಸಲಾಯಿತು.
3. ದಿನಾಂಕಃ 13-02-1964 ರ ಖರೀದಿ ಪತ್ರದ ದೃಢಿಕೃತ ನಕಲು, ಭಾಷಾಂತರ ನಕಲು ಮತ್ತು ನಕ್ಷೆಗಳನ್ನು ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು.
4. ದಿನಾಂಕಃ 17-02-1978 ರ ಮೃತ್ಯು ಪತ್ರದ ದೃಢಿಕೃತ ನಕಲನ್ನು ನಿಪಿ-5 ಎಂದು ಗುರುತಿಸಲಾಯಿತು.
5. ಅಸಲು ದಾವಾ ನಂಬರ 12/1993 ರ ತೀರ್ಪು ಮತ್ತು ಡಿಕ್ರಿಯ ದೃಢಿಕೃತ ನಕಲನ್ನು ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಯಿತು.
6. ಅಸಲು ದಾವಾ ನಂಬರ 07-06-2016 ರ ತೀರ್ಪು ಮತ್ತು ಡಿಕ್ರಿಯ ದೃಢಿಕೃತ ನಕಲನ್ನು ನಿಪಿ-8 ಮತ್ತು ನಿಪಿ-9 ಎಂದು ಗುರುತಿಸಲಾಯಿತು.

**<u>ಪ್ರತಿವಾದಿಪರ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.</u>**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ**